

# ಜೈಯಿಸಬೇಕಾದ ವೈರಿಗಳು

## ನುಡಿಯಲ್ಪಟ್ಟ ಪ್ರವಾದನೆ

ದೇಶದ ಬಗ್ಗೆಯೂ ದೇಶದ ಜನಗಳ ಬಗ್ಗೆಯೂ ದೇವರು ನುಡಿದ ವಾಗ್ದಾನಗಳನ್ನು ನೆನೆಸಿ, ಅವು ನೆರವೇರುವದಕ್ಕಾಗಿ ನಾನು ಪ್ರಾರ್ಥಿಸುತ್ತಿರುವಲ್ಲಿ, ದೇವರು ನನ್ನೊಂದಿಗೆ ಮಾತನಾಡಿ: ಇಗೋ, ದೇಶದೊಳಗೆ ಸಂಚುಗಳನ್ನು ಮಾಡಿ ವಾಗ್ದಾನಗಳನ್ನು ತಪ್ಪುವಂತೆ ಮಾಡುವದಕ್ಕೂ, ತಡವರಿಸುವಂತೆ ಮಾಡುವದಕ್ಕೂ ನನ್ನ ಜನರು, ಕಾರ್ಯಮಾಡದಂತೆ ಅವರ ಕೈಗಳನ್ನು ಕಟ್ಟಿಹಾಕಿ ಅವರನ್ನು ದೆಸೆಗೆಡಿಸುವದಕ್ಕೂ, ಗೊಂದಲಗಳನ್ನು ಅವರ ನಡುವೆ ಉಂಟುಮಾಡಿ ಅವರನ್ನು ಹುಚ್ಚರನ್ನಾಗಿ ತಿರುಗಾಡುವಂತೆ ಮಾಡುವದಕ್ಕೂ, ಉಜ್ಜೀವನಕ್ಕೆ ಮುಂಚಿತವಾಗಿ ಕಾರ್ಯಮಾಡುವದಕ್ಕೂ ಅನುಮತಿ ಹೊಂದಿದಂತ ದುಷ್ಟಾತ್ಮಗಳ ಕಾಲ ಮುಕ್ತಾಯದ ಅಂತ್ಯಕ್ಕೆ ಬಂದಿರುವ ಸಮಯ ಸಮೀಪವಾಗಿದೆ. ಈ ಸಮಯದಲ್ಲಿ ನೀವು ಸೋತುಹೋಗದೆ ಬಹು ತೀವ್ರವಾಗಿ ಹೊರಟು ಅವುಗಳಿಗೆ ವಿರುದ್ಧವಾಗಿ ನಿಮ್ಮ ಖಡ್ಗಗಳನ್ನು ಎತ್ತಿಕೊಂಡು ಹೊರಡುವುದಾದರೆ, ನಾನು ಅವುಗಳ ಮೇಲೆ ಜಯವನ್ನು ನಿಮಗೆ ಅಜ್ಞಾಪಿಸುವೆನು. ಅವು ತಮ್ಮ ಕಾಲಗಳು ಕೊನೆ ಗೊಂಡಿರುವದರ ನಿಮಿತ ಬಲಹೀನಗೊಂಡು ತಮ್ಮ ಸ್ಥಾನಗಳನ್ನು ಬಿಟ್ಟು ಓಡಿ ಹೋಗುತ್ತವೆ. ನಾನು ನೀಡಿರುವ ದೇಶದ ಮೇಲಿನ ವಾಗ್ದಾನಗಳಿಗೆ ಮಾರ್ಗವು, ಹಾದಿಯೂ ಉಂಟಾಗುತ್ತದೆ. ವೈರಿಯನ್ನು ಓಡಿಸಬೇಕಾದ ಕಾಲದೊಳಗೆ ಓಡಿಸದೆ ಅವುಗಳನ್ನು ನೀವು ಬಿಟ್ಟುಬಿಟ್ಟರೆ ಅವುಗಳು ತಮ್ಮ ಬೇರುಗಳನ್ನು ಬೀರುಬಿಟ್ಟುಕೊಂಡು, ನಿರಂತರವಾಗಿ ಉಳಿದುಕೊಳ್ಳಲು ತಮಗೆಂದು ವಾಸಸ್ಥಾನಗಳನ್ನು ಉಂಟುಮಾಡಿಕೊಳ್ಳುತ್ತವೆ. ಆದರಿಂದ, ಮುಂಬರುವ ಕೆಲವು ಕಾಲವು ನೀವು ಆತ್ಮೀಕ ಯುದ್ಧವನ್ನು ಬಹುಕಠಿಣದಿಂದ ನಡೆಸುವ ಯುದ್ಧಕಾಲವಾಗಿರುತ್ತದೆ. ಅನುಮತಿ ಹೊಂದಿ ಕಾರ್ಯಮಾಡಿದಂತಹ ದುಷ್ಟಾತ್ಮಗಳ ಕ್ರಿಯೇಗಳು ತಗ್ಗಿಹೋಗುವಂತೆ ನೀವು ಪ್ರಾರ್ಥಿಸಲು ಇದುವರೆಗೂ ಆಜ್ಞಾಪಿಸಿದೆನು. ಈಗಲಾದರೋ ಅವುಗಳಿಗೆ ನೀಡಿದಂತ ಸಮಯವು ಕೊನೆಗೊಂಡಿರುವದರಿಂದ ಅವುಗಳನ್ನು ತಗ್ಗಿಸಲು ಮಾತ್ರವಲ್ಲ, ಓಡಿಸುವದಕ್ಕೂ, ಜೈಯಿಸುವದಕ್ಕೂ ಆಜ್ಞಾಪಿಸುತ್ತೇನೆ. ಖಡ್ಗವನ್ನು ಎತ್ತುವವನು ಮುಂದೆ ನುಗ್ಗಿ ವೈರಿಯ ಪಾಳೆಯದಲ್ಲಿ ತನ್ನ ಯುದ್ಧವನ್ನು ಆರಂಭಿಸುವವನಾಗಲಿ, ಅವುಗಳ ಕಾಲ ಅಂತ್ಯಕ್ಕೆ ಬಂದಿರುವದರಿಂದ ಅವುಗಳ ಬಲವು, ಅಧಿಕಾರವು ಬಲಹೀನಗೊಳ್ಳಲು ತೊಡಗುತ್ತದೆ. ನೀವು ಯುದ್ಧಮಾಡುವ ಸಮಯದಲ್ಲಿ ಅವುಗಳು ಸುಲಭವಾಗಿ ಓಡಿಸಲ್ಪಡುವಂತದ್ದನ್ನು ಕಾಣುವಿರಿ. ದುಷ್ಟಜನರಿನಿಂದಲೂ, ಗೊಂದಲಗಳಿಂದಲೂ, ಕಲಹಗಳಿಂದಲೂ, ದೇಶವನ್ನು ತಡವರಿಸುವಂತ ಮಾಡಿದಂತಹ ಆತ್ಮಗಳಿಗೆ ವಿರುದ್ಧವಾಗಿ ನಿಮ್ಮ ಯುದ್ಧಗಳನ್ನು ಆರಂಭಿಸಿರಿ. ಯುದ್ಧಮಾಡುವ ಕಾಲದಲ್ಲಿ ಮೌನವಾಗಿದ್ದರೆ ಮುಂದೆ ಅವುಗಳನ್ನು ಓಡಿಸಲಾಗದ ಮಟ್ಟಿಗೆ ಅವುಗಳು ಬಲವನ್ನು ಹೊಂದಿಕೊಳ್ಳುತ್ತದೆ. (ನುಡಿಯಲ್ಪಟ್ಟ ದಿನ 20.07.2017)

## ಪ್ರಾರ್ಥನಾ ಮನವಿ

01. ದೇಶದ ಬಗ್ಗೆ ದೇವರು ಮಾತನಾಡಿ ಹೇಳಿಸಿರುವಂತ ಉಜ್ಜೀವನವನ್ನೊಳಗೊಂಡ ಎಲ್ಲಾ ವಿಧವಾದ ವಾಗ್ದಾನಗಳು ನೆರವೇರುವ ಸಮಯ ಸಮೀಪವಾಗಿದೆ ಇದಕ್ಕಾಗಿ ಅತ್ಯಾಸಕ್ತಿಯಿಂದ ಪ್ರಾರ್ಥಿಸಿರಿ.

02. ದೇಶದಲ್ಲಿ ನಡೆಯುತ್ತಾ ಬರುತ್ತಿರುವಂತ ವಿಭಿನ್ನವಾದ ಅನಾಹುತಗಳನ್ನು ನೋಡುವದರಿಂದ ವಾಗ್ದಾನವನ್ನು ಹೊಂದಲು ದೇವರ ಮಕ್ಕಳ ಹೃದಯವು ಸೋತುಹೋಗಿರಬಹುದು. ದೇವರು ಅವರೆಲ್ಲರನ್ನು ತನ್ನ ಚೈತನ್ಯದ ಆತ್ಮದಿಂದಲೂ, ಎರಡರಷ್ಟು ಅಭಿಷೇಕದಿಂದಲೂ ದೇವರು ಅವರನ್ನು ತುಂಬಿಸಿ ಪ್ರಾರ್ಥನೆಯಲ್ಲಿ ಉಪಯೋಗಿಸಲ್ಪಡುವಂತೆಯೂ ಪ್ರಾರ್ಥಿಸಿರಿ.

03. ದೇಶದ ಬಗ್ಗೆ ದೇವರು ನುಡಿದ ವಾಗ್ದಾನಗಳನ್ನು ತಡೆಮಾಡುವದಕ್ಕಾಗಿ ಅನುಮತಿ ಹೊಂದಿ ಬಂದಿರುವ ದುಷ್ಟಾತ್ಮಗಳ ಹೆಸರುಗಳನ್ನು ದೇವರು ತಿಳಿಸಿದ್ದಾನೆ. ಅವುಗಳ ಕಾರ್ಯಗಳು ತಗ್ಗಿಹೋಗಲು ಇದುವರೆಗೂ ಪ್ರಾರ್ಥಿಸಿದೆವು. ಇನ್ನು ಮುಂದೆ ಈ ಆತ್ಮಗಳು ಓಡಿಸಲು ಪ್ರಾರ್ಥಿಸಿರಿ.

04. ಇದು ದೇಶದಲ್ಲಿ ತಡೆಯುಂಟುಮಾಡಲು ಹೊರಟಿರುವಂತ ಆತ್ಮಗಳಿಗೆ ವಿರುದ್ಧವಾಗಿ ಯುದ್ಧಮಾಡುವಂತ ಸಮಯ. ಆತ್ಮೀಕ ಆಯುಧಗಳನ್ನು ಸರಿಮಾಡಿಕೊಂಡು, ದೇವರು ಪ್ರಕಟಿಸಿರುವಂತ ದುರಾತ್ಮಗಳ ಹೆಸರುಗಳನ್ನು ನೆನಪಿಗೆ ತಂದುಕೊಂಡು ಪ್ರತಿಯೊಂದು ದುರಾತ್ಮಗಳಿಗೆ ವಿರುದ್ಧವಾಗಿ ಯುದ್ಧಪ್ರಾರ್ಥನೆಯನ್ನು ಮಾಡಿರಿ.

05. ದೇಶದಲ್ಲಿ ದೇವರು ಮಾಡಲು ನೆನೆಸಿದ ಯಾವ ಒಂದು ಕಾರ್ಯವು ತಡೆಯಿಲ್ಲದೆ ನಡೆಯಬೇಕು. ಇದಕ್ಕಾಗಿ ಭಾರದಿಂದ ಮೊರೆಯಿಡುವ ವಿಶ್ವಾಸಿಗಳು, ಸಭೆಗಳು ಬಹಳವಾಗಿ ಎದ್ದು, ಇಂತಹ ದುಷ್ಟ ಆತ್ಮಗಳನ್ನು ಎದುರಿಸಿ ನಿಂತು ಯುದ್ಧಮಾಡುವ ಉದ್ದೇಶಗಳನ್ನು ದೇವರು ನಮಗೆ ಪ್ರಕಟಿಸುವಂತೆಯೂ ಪ್ರಾರ್ಥಿಸಿರಿ.